ಪ್ರೌಢಶಾಲಾ ಶಿಕ್ಷಕರಾಗುವಂತಿಲ್ಲ. ಇಂಥ ಕೆಲವರು ಎಂ.ಎ. ಎಂ.ಎಡ್. ಎಂ.ಪಿ.ಎಡ್. ಮೊದಲಾದ ಪದವಿಗಳನ್ನು ತಮ್ಮ ಸ್ವಂತ ಪ್ರತಿಭೆ, ಅನನ್ಯವಾದ ಅಧ್ಯಯನದಿಂದ ಗಳಿಸಿದವರಿದ್ದಾರೆ. ಉಚ್ಚ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶಿಕ್ಷಣ ಇಲಾಖೆಗೆ ಕೀರ್ತಿ ತಂದವರಿದ್ದಾರೆ. ಬದುಕಿನ ಒಂದೆರಡು ದಶಕಗಳನ್ನು ಅಧ್ಯಯನ, ಅಧ್ಯಯನ ಕಾರ್ಯಕ್ಕೆ ಮುಡಿಪಾಗಿಟ್ಟು ಇಂಥ ಶಿಕ್ಷಕ ಬಂಧುಗಳ ಉತ್ಸಾಹದ ಕುಡಿ ಕಮರಬಾರದು. ನಿಯಮಗಳನ್ನು ತಿದ್ದುಪಡಿ ಮಾಡಿ ಅಂಥವರಿಗೆ ಸ್ಥಾನ ಬಡ್ತಿಯ. ಅರ್ಹತೆ ದೊರಕಿಸಬೇಕು. ಆದ್ದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಪ್ರತಿಭೆಗಳು ಪುರಸ್ಕೃತವಾಗಿ ಅರಳುವಂತಾಗಬೇಕು. ಅವರ ಪರಿಶ್ರಮಕ್ಕೆ ಯೋಗ್ಯತೆಗೆ ಸರಕಾರ ಸರಿಯಾದ ಗೌರವ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ.ಜಿ. ಜಾರ್ಜ್ (ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿ ಕೊಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

1991ನೇ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿ) ಪರವಾಗಿ : ಮಾನ್ಯ ಅಧ್ಯಕ್ಷರೆ 1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿ) ಪರವಾಗಿ : ಮಾನ್ಯ ಅಧ್ಯಕ್ಷರೆ 1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-1

ಪರ್ಯಾಲೋಚನಾ ಪ್ರಸ್ತಾವ

1991ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ 1991ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು .

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ ಬೆಂಗಳೂರು ಪ್ರಾಧಿಕಾರದ ಬಗ್ಗೆ ಸಾಕಷ್ಟು ಚರ್ಚೆಯನ್ನು ಎರಡು ಕಡೆಯ ಮಾನ್ಯ ಸದಸ್ಯರು ಮಾಡಿದ್ದಾರೆ. ಮೊದಲನೆಯದಾಗಿ ಆಡಳಿತಪಕ್ಷದ ಅನೇಕ ಸದಸ್ಯರು, ಹಿರಿಯರಾಗಿರತಕ್ಕಂಥ

ಸನ್ಮಾನ್ಯ ಆನಂತಕೃಷ್ಣರವರು ಕಳೆದ ಸಾರಿ ಮಾತನಾಡಿ ಒಂದು ಸಮಗ್ರ ತಿದ್ದುಪಡಿಯನ್ನು ಬೆಂಗಳೂರು ಪ್ರಾಧಿಕಾರಕ್ಕೆ ತರಬೇಕೆನ್ನುವ ಮಾತನ್ನು ಹೇಳಿದ್ದರು. ಯಾವುದೇ ಸರ್ಕಾರ ಇರಲಿ ನಮ್ಮ ಸರ್ಕಾರ ಇದ್ದಾಗಲೂ ಏನೂಕೆಲಸ ಆಗಲಿಲ್ಲ. ನಾವು ಅಧಿಕಾರದಲ್ಲಿ ಇದ್ದಾಗ ತಾವ ಏನು ಮಾಡಿದಿರಿ ಎಂದು ಮಾನ್ಯ ಸದಸ್ಯರಾದ ಆರ್.ಎನ್. ನಾಯಕರು ತಕ್ಷಣ ಕೇಳಿಬಿಡುತ್ತಾರೆ. ಏತಕ್ಕೆಂದರೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಫಂಕ್ಷನಿಂಗ್‌ನಲ್ಲಿ ಈಗ ಏನೂ ಆಗುತ್ತಿಲ್ಲ. ಕಳೆದ 2-3 ವರ್ಷಗಳಿಂದ ಸೈಟ್ಸ್‌ಗಳ ಹಂಚಿಕೆಯಾಗುತ್ತಿಲ್ಲ ಮತ್ತೆ 7-8 ಆಟೆಂಪಟ್ಸ್ ಮಾಡಿಬಿಟ್ಟು ಅನೇಕ ಜನ ದುಡ್ಡನ್ನು ಬಿ.ಡಿ.ಎ.ನಲ್ಲಿ ದುಡ್ಡನ್ನು ಇಟ್ಟು ಸೈಟ್‌ಗಳಿಗೋಸ್ಕರವಾಗಿ ಕಾದಿದ್ದಾರೆ. ಈಗ ಬಿ.ಡಿ.ಎ. ಹತ್ತಿರ ಜಮೀನಂತೂ ಇಲ್ಲ. ಇವರು ಏನು ಜಮೀನನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ ಆದರ ಮೇಲೆ ಕೋ ಆಪರೇಟೀವ್ ಸೊಸೈಟಿಯವರು ಮತ್ತೊಬ್ಬರು ಮೊಗದೊಬ್ಬರು ಕೋರ್ಟಿಗೆ ಹೋಗಿಬಿಟ್ಟು ಎಲ್ಲಾ ವ್ಯವಹಾರಗಳು ಸಹಿತ ಕೋರ್ಟಿನಲ್ಲಿ ನಿಂತಿದ್ದೆ. ನನಗೆ ಗೊತ್ತಿರುವಹಾಗೆ ಬಿ.ಡಿ.ಎ.ನವರಿಗೆ ಯಾರು ಸೈಟ್ಸ್ ಬೇಕೆಂದು ಅರ್ಜಿಗಳನ್ನು ಹಾಕಿ ದುಡ್ಡನ್ನು ಕೊಟ್ಟಿರುತ್ತಾರೆ ಆ ದುಡ್ಡನ್ನು ಫಿಕ್ಸ್‌ಡ್ ಡಿಪಾಸಿಟ್‌ನಲ್ಲಿ ಇಟ್ಟಿದ್ದಾರೆ. ಆ ಫಿಕ್ಸೆಡ್ ಡಿಪಾಸಿಟ್‌ನಲ್ಲಿ ಬರತಕ್ಕಂಥ ಇಂಟರೆಸ್ಟ್‌ನಿಂದ ಬಿ.ಡಿ.ಎ.ನವರು ಕೆಲಸ ಮಾಡುತ್ತಿದ್ದಾರೆ. ಅದು ಒಂದು ಸೈಟ್ ಡಿಸ್ಟ್ರಿಬ್ಯೂಷನ್‌ನಲ್ಲಿ ಆಗುತ್ತಿರುತಕ್ಕಂಥ ವ್ಯವಸ್ಥೆ ಇನ್ನು ಎರಡನೆಯದಾಗಿ ಅಲ್ಪಸ್ವಲ್ಪ ಬಿ.ಡಿ.ಎ.ನವರು ಏನಾದರೂ ಕೆಲಸ ಮಾಡುತ್ತಿದ್ದಾರೆಯೇ ಎಂದು ನೋಡಿದರೆ ಅಲ್ಲಿ ಬರೀ ಕೊಕ್ಕೆಗಳನ್ನು ಹಾಕಿಕೊಂಡು ಕುಳಿತುಕೊಂಡು ಹೋಗುತ್ತಿರುವುದನ್ನು ಅಲ್ಲಿರುವ ಹಿರಿಯ ಅಧಿಕಾರಿಗಳನ್ನೇ ಕೇಳಬೇಕು. ಅಲ್ಲಿ ಒಂದು ದೊಡ್ಡ ಜಾಲವೇ ಇದೆ. ಅಲ್ಲಿ ಆಫೀಸಿಗೆ ಮೂರರಿಂದ ಐದು ಗಂಟೆಗೆ ಬರಬೇಕೆಂದು, ಬೆಳಗ್ಗೆ ಹೊತ್ತು ಯಾರು ಬರಬಾರದೆಂದು ಹೇಳತಕ್ಕಂಥ ಒಂದು ಕೆಲಸ ನಡೆದಿದೆ. ಅದಾದಮೇಲೆ ಇಷ್ಟೇ ದಿವಸದಲ್ಲಿ ಅಪ್ಲಿಕೇಷನ್‌ನ್ನು ಡಿಸ್‌ಪೋಸ್ ಮಾಡಬೇಕೆಂದು ಹೇಳಿ ಒಂದು ಟೋಕನ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡಬೇಕೆಂದು ಪ್ರಯತ್ನ ಮಾಡಿದರೂ ಯಾವುದೂ ಸಹಿತ ಸಫಲವಾಗಲಿಲ್ಲ. ಬೆಂಗಳೂರು ಡೆವಲೆಪ್‌ಮೆಂಟ್ ಅಥಾರಿಟಿಯವರಿಂದ ನಿಜವಾಗಿಯೂ ಸೈಟ್ಸ್ ಇಲ್ಲದಿರತಕ್ಕಂಥ ಜನರು ಯಾರಿರುತ್ತಾರೆ ಅವರಿಗೆ ಸೈಟ್ಸ್‌ಗಳನ್ನು ಕೊಡಲಿಕ್ಕೆ ಆಗುತ್ತಿಲ್ಲ. ಸರ್ಕಾರದವರು ಈಗಾಗಲೇ 1984-85 ನೇ ಇಸವಿಯಲ್ಲಿ ಆಟದ ಮೈದಾನಗಳು, ನಗರ ಸೌಲಭ್ಯಗಳಿಗೆ ಆಗ ಮಾಡಿ ಕೊಡಬೇಕಾಗಿರತಕ್ಕಂಥ ಜಮೀನುಗಳ ಬಗ್ಗೆ ಒಂದು ಮಸೂದೆಯನ್ನು, ಕಾನೂನನ್ನು ತರಲಿಕ್ಕೆ ಹೊರಟಿದ್ದಾರೆ. ಈಗ ಡಲ್ಲಿ ಮತ್ತು ಹೊಸದಾಗಿ ಕಟ್ಟಿರತಕ್ಕಂಥ ಚಂಡಿಘಡದಲ್ಲಿ ನಾವು ನೋಡಿರತಕ್ಕಂಥದ್ದು ಏನೆಂದರೆ ಅಲ್ಲಿ ಅಮಿನೆಟೀಸ್‌ಗೆ ವಿಶೇಷವಾಗಿ ವ್ಯವಸ್ಥೆ ಮಾಡಿರುತ್ತಾರೆ. ನಮ್ಮ ಬೆಂಗಳೂರಿನಲ್ಲಿ ನಮ್ಮ ಟ್ರಾನ್ಸ್‌ಪೋರ್ಟ್ ಸಿಸ್ಟಮ್ ಈಗಿರತಕ್ಕಂಥದ್ದು ಟೋಟಲಿ ಫೈಲ್ಯೂರ್ ಎನ್ನುವುದು ತಮಗೆಲ್ಲಾ ಗೊತ್ತಿದೆ. ಪ್ರತಿಯೊಂದು ನಿಮಿಷಕ್ಕೂ ಸಹಿತ ಬೆಂಗಳೂರು ಸಿಟಿಯಲ್ಲಿ ಸಿಟಿಮಾರ್ಕೆಟ್, ಶಿವಾಜಿನಗರ ಮತ್ತು ಮೆಜೆಸ್ಟಿಕ್ ಇಂಥ ಕಡೆ ಅಲ್ಲಿರತಕ್ಕಂಥ ಕನ್‌ಸೇಷನ್ ನಾವು ನೋಡುತ್ತಿರುತ್ತೇವೆ. ಈಗ ಹೊಸದಾಗಿ ಆಗಿರತಕ್ಕಂಥ ಬಡಾವಣೆಯಲ್ಲೂ ಸಹ ಟ್ರಾನ್ಸ್‌ಪೋರ್ಟ್ ಪರ್ಪಸ್‌ಗೆ ಎಂದು ಹೇಳಿಬಿಟ್ಟು ಯಾವ ಜಮೀನನ್ನು ಇಡಲಿಕ್ಕೆ ಆಗುತ್ತಿಲ್ಲ ಇದರಿಂದಾಗಿ ಆಕ್ಸಿಡೆಂಟ್‌ಗಳು ಹೆಚ್ಚಾಗುತ್ತಿರುತ್ತವೆ. ಮೊನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಆಕ್ಸಿಡೆಂಟ್ಸ್ ಕಡಿಮೆ ಮಾಡುವುದಕ್ಕೆ ಟ್ರಾನ್ಸ್‌ಪೋರ್ಟ್ ವೀಕ್ ಎಂದು ಸಲಬರೇಟ್ ಮಾಡಿದ ಪಂಕ್ಷನ್‌ಗೆ ಹೋಗಿದ್ದರೆಂದು ಹೇಳಿದ್ದಾರೆ. ಅಲ್ಲೂ ಸಹ 440 ಜನ ಸತ್ತಿದ್ದಾರೆ. 10 ಸಾವಿರ ಜನಸಂಖ್ಯೆಗೆ ಅಪಘಾತವಾಗಿದೆ. ಎಂದು ಹೇಳಿದ್ದಾರೆ. ಅಂದರೆ ಪ್ರತಿದಿವಸಕ್ಕೆ ಬೆಂಗಳೂರಿನಲ್ಲಿ ಒಬ್ಬರು ಸಾಯುತ್ತಿದ್ದಾರೆಂದು ಖಾಯಂ ಆಯಿತು. ಕೊನೆಯ ಪಕ್ಷ ಎಕ್ಸ್‌ಟೆನ್‌ಷನ್ ಏರಿಯಾಗಳಲ್ಲಿ ಎಕ್ಸ್‌ಕ್ಲೋಸೀವ್ ಆಗಿ ಇದಕ್ಕಾಗಿ ಸೈಟುಗಳನ್ನು ಇಡಬೇಕೆಂದರೆ ಆಗುತ್ತಿಲ್ಲ. ನಾನು ಸಾರಿಗೆ ಸಚಿವನಾಗಿದ್ದಾಗ ಬಿಡಿಎ ವತಿಯಿಂದ

ಬಿಟಿಎಸ್ ಬಸ್ ಸ್ಟ್ಯಾಂಡಿಗೋಸ್ಕರ ಜಾಗ ಇಡಬೇಕೆಂದು ಪ್ರಯತ್ನ ಮಾಡಿದ್ದರೂ ಅದು ಆಗಲಿಲ್ಲ. ಆ ಕಾರಣಗಳಿಂದ ಫೀಸ್‌ಮೀಲ್ ಸಿಸ್ಟಂನ್ನು ಬದಲಾಯಿಸಿ ಮೂಲಭೂತವಾಗಿ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಒಂದು ದೃಷ್ಟಿಯಿಂದ ಇದನ್ನು ರದ್ದು ಮಾಡುವುದೇ ಒಳ್ಳೆಯದೆಂದು ನನ್ನ ಅಭಿಪ್ರಾಯ. ಆದರೆ ರದ್ದು ಮಾಡುವುದಕ್ಕಾಗುವುದಿಲ್ಲವೆಂದು ಗೊತ್ತಿದೆ. ಆದುದರಿಂದ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳತಕ್ಕದ್ದು ಕೊನೇ ಪಕ್ಷ ಫೀಸ್‌ಮೀಲ್ ಸಿಸ್ಟಂ ಮಾಡುವುದರ ಬದಲು ಆಮೂಲಾಗ್ರವಾಗಿ ಬದಲಾವಣೆ ತರತಕ್ಕ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಒತ್ತಾಯಿಸುತ್ತೇನೆ. ಇವತ್ತಿನ ದಿವಸ ಲಕ್ಷಾಂತರ ಮಂದಿ ಬಿಡಿಎ ಸೈಟಿಗೋಸ್ಕರ ಹಣವನ್ನು ಡಿಪಾಸಿಟ್ ಮಾಡಿ 6-7 ಅಟೆಂಪ್ಟ್ ಮಾಡಿಕೊಂಡು ಕುಳಿತಿದ್ದಾರೆ. ಅವರಿಗೆ ಇಂಟರೆಸ್ಟ್ ಕೊಡುವುದಕ್ಕಾಗುತ್ತಿಲ್ಲ, ಇದು ಒಂದೆರಡು ವರ್ಷ ಕಾಲದಲ್ಲಿ ಬಿಡಿಎ ವತಿಯಿಂದ ಯಾವ ಸರ್ಕಾರ ಬಂದರೂ ಸೈಟು ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಜನರಿಗೆ ದುಡ್ಡನ್ನಾದರೂ ವಾಪಸ್ಸು ಕೊಡಬೇಕೆಂದು ಹೇಳುತ್ತೇನೆ. ಅದರಿಂದ ಜನರು ಮೆಚ್ಚುತ್ತಾರೆ. ಸೈಟು ಕೊಡುವುದಕ್ಕೆ ಆಗದೆಹೋದರೆ ದುಡ್ಡನ್ನಾದರೂ ಕೊಟ್ರಲ್ಲ ಎಂದು ಜನ ಮೆಚ್ಚುತ್ತಾರೆ. ಈ ಕೆಲಸವನ್ನು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ, ಈವಿಧೇಯಖವನ್ನು ವಾಪಸ್ಸು ಪಡೆದು ದಯವಿಟ್ಟು ಸಮಗ್ರವಾಗಿ ಬದಲಾವಣೆ ತರತಕ್ಕ ಪ್ರಯತ್ನ ಮಾಡಿ ಸಾಮಾನ್ಯವಾಗಿ ಬೆಂಗಳೂರು ಜನರಿಗೆ ಅನುಕೂಲವಾಗತಕ್ಕ ಇವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಬೆಂಗಳೂರಿನಲ್ಲಿ ಯಾರು ಸೈಟ್‌ಲೆಸ್ ಪೀಪಲ್ ಇದ್ದಾರೆ ಅವರಿಗೆ ಅನುಕೂಲವಾಗತಕ್ಕ ಮಸೂದೆಯನ್ನು ಮಂಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ಮಾನ್ಯ ವಿರೋಧಪಕ್ಷದ ಉಪ ನಾಯಕರು ಹೇಳಿರತಕ್ಕ ಒಂದು ಭಾಗವನ್ನು ಒಪ್ಪುತ್ತೇನೆ. ಬಿಡಿಎ ಬರುವುದಕ್ಕೆ ಮೊದಲು ಟ್ರಸ್ಟ್ ಬೋರ್ಡ್ ಎಂದು ಇತ್ತು. ಆಮೇಲೆ ಡೆವಲೆಪ್‌ಮೆಂಟ್ ಅಥಾರಿಟಿ ಎಂದು ಮಾಡಿದರು. ಮಾಡಿದ ಮೇಲೆ ಹಲವಾರು ಕೆಲಸಗಳನ್ನು, ಸೈಟು ಕೊಡತಕ್ಕ ವಿಚಾರದಲ್ಲಿ ಕೊಟ್ಟಿದ್ದಾರೆ. ದಿ|| ದೇವರಾಜ ಅರಸು ಅವರ ಕಾಲದಿಂದ ಇದು ನಡೆಯುತ್ತಿದೆ ಇದು ಎಷ್ಟೇ ಸೈಟುಗಳನ್ನು ಕೊಡತಕ್ಕ ಕೆಲಸ ಮಾಡಿದರೂ ಜನರಿಂದ ಅನ್ಯಾಯವಾಗಿದೆ ಎಂದು ಪದೇ ಪದೇ ಕೇಳುತ್ತಿದ್ದೇವೆ. ಚಿಕ್ಕ ಚಿಕ್ಕ ಸೈಟುಗಳನ್ನು ಮಾಡಿ ಬಡವರಿಗೆ ಕೊಡಬೇಕೆಂಬ ಕಾರ್ಯಕ್ರಮ ದೊಡ್ಡ ಪ್ರಮಾಣದಲ್ಲಿ ಆ ಕಾಲದಲ್ಲಿ ನಡೆಯಿತು. ಇತ್ತೀಚೆಗೆ ನಾನು ಬಿಡಿಎ ಅಧಿಕಾರಿಗಳ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅದೇ ಕಛೇರಿಯಲ್ಲಿ ಸಭೆ ನಡೆಸಿದ್ದೇನೆ. ಎಷ್ಟು ಭೂಮಿ ನಮ್ಮ ಹತ್ತಿರ ಇದೆ. ಅದರಲ್ಲಿ ಎಷ್ಟು ಸೈಟುಗಳನ್ನು ಮಾಡಬಹುದೆಂದು ನೋಡಿ, ಡಿಮ್ಯಾಂಡ್ ನೋಡುವುದಕ್ಕೆ ಹೋದರೆ ಸಿಕ್ಕಾಪಟ್ಟೆ ಇದೆ. ಹೀಗಿರುವಾಗ ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಪ್ರಶ್ನೆ ಬರುತ್ತದೆ. ಬಡವರು ಮತ್ತು ಮಧ್ಯಮ ವರ್ಗದ ಜನರೇನಿದ್ದಾರೆ ಅವರಿಗೆ ಸೈಟು ಕೊಡುವುದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗುತ್ತದೆಂದು ಮಾತನಾಡಿದ್ದೆ. ಆದರೆ ಅನೇಕರು ಜಾಗದ ಬಗ್ಗೆ ಕೋರ್ಟಿಗೆ ಹೋಗಿ ಕುಳಿತುಕೊಂಡಿದ್ದಾರೆ. ತಪ್ಪು ಬಿಡಿಎ ಮಾಡಿರತಕ್ಕದ್ದು ಇರಬಹುದು ಅಥವಾ ಬೇರೆಯವರು ಮಾಡಿರತಕ್ಕದ್ದು ಇರಬಹುದು. ಆ ಕಾರಣಗಳಿಂದ ನೂರಾರು ಸಾವಿರಾರು ಎಕರೆ ಜಮೀನಿನ ವ್ಯವಹಾರ ಕೋರ್ಟಿನಲ್ಲಿ ಸಿಕ್ಕಿಕೊಂಡಿರುವುದರಿಂದ ಬಿಡಿಎಯಲ್ಲಿ ಒಂದು ಕೆಲಸವು ಆಗುತ್ತಿಲ್ಲ. ಈ ಬಗ್ಗೆ ಅಡ್ವೋಕೇಟ್ ಜನರಲ್ ಅವರನ್ನು ಒತ್ತಾಯಿಸಿ ಸ್ಟೇ ತಂದಿರುವುದನ್ನು ಕ್ಯಾನ್ಸಲ್ ಮಾಡಿಸಿ ಭೂಮಿಯನ್ನು ಬಿಡಿಎ ವಶಕ್ಕೆ ತೆಗೆದುಕೊಂಡು ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ನಿವೇಶನಗಳನ್ನು ಕೊಡಬೇಕೆಂಬ ಕಾರ್ಯಕ್ರಮ ಇದೆ. ಇದಕ್ಕೆ ಈಗಿರತಕ್ಕ ಕಾನೂನಿಗೆ ಬಹಳ ತಿದ್ದುಪಡಿಗಳು ಬೇಕಾಗುತ್ತವೆ. ಈ ಬಗ್ಗೆ ಹೊಸ ವಿಚಾರ ಧಾರೆಯನ್ನು ತಾಳದಿದ್ದರೆ ಹಲವಾರು

ಆಪಾದನೆಗಳಿಗೆ ಒಳಗಾಗತಕ್ಕ ವಿಚಾರ ಇದರಲ್ಲಿ ಅಡಗಿದೆ. ಇವತ್ತಿನ ದಿವಸ ಅಲ್ಲಿ ಕೆಲಸ ಕಾರ್ಯ ನಡೆಯುತ್ತಿಲ್ಲವೆಂದು ಇದೆ. ಹಲವಾರು ಮಂದಿ ನಿವೇಶನಕ್ಕಾಗಿ ಹಣ ಕಟ್ಟಿದ್ದಾರೆ. After all, it is their money, people's money. What right we have got to keep that money.

Mr. Speaker : By way of academic interest, I would like to know as to what would be the money deposited in BDA by the general public. You can tell the House, if you have got the figures.

ಶ್ರೀ ಎಸ್. ಬಂಗಾರಪ್ಪ : ಎಷ್ಟು ಎಂಬುದನ್ನು ಕರಾರುವಕ್ಕಾಗಿ ತಿಳಿದು ಹೇಳುತ್ತೇನೆ. It is in terms of crores of rupees only.

ಮಾನ್ಯ ಸಭಾಧ್ಯಕ್ಷರೆ, ಈ ಹಣವನ್ನು ನಾವು ಇಟ್ಟುಕೊಂಡು ಈ ಕಡೆ ಬಡ್ಡಿಯೂ ಕೊಡುವುದಿಲ್ಲ, ಜಾಗ ಕೊಡುತ್ತೇವೆ ಎಂಬ ಗ್ಯಾರಂಟಿಯೂ ಇಲ್ಲ. ಹಣ ಹಾಗೆಯೇ ಇಟ್ಟುಕೊಂಡು ಕುಳಿತಿದ್ದೇವೆ. ನಾವು ಕೂಡ ಅಷ್ಟೇ ಸೀರಿಯಸ್ಸಾಗಿ ವಿಚಾರ ಮಾಡುತ್ತಿದ್ದೇವೆ. ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಹಾಗೆ ಮಾಡುವುದು ಒಳ್ಳೆಯದಲ್ಲ, ಈ ಮದ್ಯೆ ಕೋರ್ಟಿಗೆ ಹೋಗಿ ವ್ಯವಹಾರ ಮಾಡಿದ್ದಾರೆ. ಕೋಡಬಾರದು ಎಂಬ ಅಭಿಪ್ರಾಯ ಅಲ್ಲ. ಸೈಟು ಕೊಡುವುದಕ್ಕೆ ಆಗದಿದ್ದರೆ ಹಣವನ್ನಾದರೂ ವಾಪಸ್ ಕೊಡಬೇಕು. ಹಣ ತೆಗೆದುಕೊಂಡ ಮೇಲೆ ಮರ್ಯಾದೆಯಿಂದ ಸೈಟು ಕೊಡುವುದು ಒಳ್ಳೆಯದು ಎಂಬ ಭಾವನೆಯಿಂದ ಹೇಳುತ್ತಿದ್ದೇನೆ. ಎಲ್ಲಾ ರೆಡಿ ಮಾಡಿ ಒಂದು ವರದಿ ತಯಾರು ಮಾಡಿ ಕೋಡಬೇಕು. ಸರ್ಕಾರ ಅತಿ ಶಾರ್ಪ್‌ವಾಗಿ ಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದ್ದೇನೆ.

While taking certain decisions if certain amendments are requird to the existing laws we should not hesitate in that regard ಎಂಬುದು ಕೂಡ ನಾವು ವಿಚಾರ ಮಾಡಿದ್ದೇವೆ. ಇದು ಸಮಗ್ರವಾಗಿರತ್ತದ್ದು. ಇನ್ನೂ ಬಹಳ ವಿಚಾರಗಳಿವೆ. ಬಿ.ಡಿ.ಎ. ವಿಚಾರವೇ ಅನೇಕ ಘಂಟೆಗಳ ಕಾಲ ಚರ್ಚೆಯಾದರೂ ಬಗೆಹರಿಯದಂಥದ್ದು ಎಂದು ನಾನು ತಿಳಿದಿದ್ದೇನೆ. ತಮಗೆ ಗೊತ್ತಿರುವ ಹಾಗೆ ಇದು 1988ಕ್ಕೆ ಸಂಬಂಧಪಟ್ಟಿರತಕ್ಕ ಸಂದರ್ಭದಲ್ಲಿ ಹೈಕೋರ್ಟಿನವರು ಆ ವಿಚಾರ ಕೂಡ ಕೇಳಿದ್ದರು ವ್ಯಾಲಿಡೇಟ್ ಮಾಡಬೇಕು ಎಂದು. ಒಂದೇ ಒಂದು ಮಾತು ಹೇಳುತ್ತಿದ್ದೇನೆ. Parks or the places meant for Hundu Temple mosques, churches, or some other religion ಇದಕ್ಕೆ ಸಂಬಂಧಪಟ್ಟಿರತಕ್ಕದ್ದು. ಇದನ್ನು ಕೂಡ ಸೈಟ್ ಮಾಡಿ ಕೊಡುವುದರಲ್ಲಿ ಅರ್ಥವಿಲ್ಲ. ಸಿವಿಕ್ ಅಮೆನಿಟೀಸ್ ಎಂದು ಹೇಳುವುದು, ಪಾರ್ಕ್ ಇರುವ ಕಡೆ ತೆಗೆದುಕೊಂಡು ಹೋಗಿ ಕಟ್ಟುವುದನ್ನು ಮೊದಲು ನಿಲ್ಲಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ನಾನು ಸದನ ಮಾಹಿತಿಗಾಗಿ ಹೇಳುತ್ತಿದ್ದೇನೆ. ಕೋರಮಂಗಲ ಜೆ.ಪಿ. ನಗರ ಸೆಕೆಂಡ್ ಸ್ಟೇಜ್ ಇಂಥ ಕಡೆ ಹೊಸ ಬಡಾವಣೆಯಲ್ಲಿ ಬಸ್ ಸ್ಟಾಂಡ್ ಕಟ್ಟುವುದಕ್ಕೆ 120 X 80 ಅಡಿ ಸೈಟ್ ಬಕೇಳದರೆ ದುಡ್ಡು ಕೇಳುತ್ತಾರೆ. ಆದರೆ ಇಲ್ಲಿ ರಮಣ ಮಹರ್ಷಿ ಸಂಸ್ಥೆಗೆ ಎಷ್ಟು ಬೇಕಾದರೂ ಸೈಟ್ ಕೊಡುತ್ತಾರೆ. ಈ ಪರಿಸ್ಥಿತಿ ಇದೆ. ನಾನು ಈ ಪಾರ್ಟಿಕ್ಯುಲರ್ ವಿಚಾರದಲ್ಲಿ ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ವಸ್ತು ಸ್ಥಿತಿ ಹೇಳುತ್ತಿದ್ದೇನೆ ನಾನು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷಣೆಯವರೆ, ಅವರು ಹಣದ ಬಗ್ಗೆ ಕೇಳಿದ್ದಾರೆ. ಡಿಪಾಸಿಟ್ ಹಣ 20 ಕೋಟಿ ರೂಪಾಯಿ ಇದೆ. ಈ ಫಿಗರ್ ಹೆಚ್ಚುಕಡಿಮೆ ಇದೆ. ಕರಾರುವಾಕ್ಕಾಗಿ ಸಿಗುತ್ತಿಲ್ಲ.

(ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿದ್ದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಣ ವಾಪಸ್ ಕೊಡಿಸಿಬಿಡಿ. ಜನ ಹೊಗಳುತ್ತಾರೆ. ಏಳೆಂಟು ಅಂಟಿಪ್ಪ್ ಮಾಡಿದ್ದಾರೆ. ಅಂದರೆ ಐದಾರು ವರ್ಷಗಳಿಂದ ಕಾದಿದ್ದಾರೆ. ದುಡ್ಡು ವಾಪಸ್ ಬಂದರೆ ಸಂತೋಷಪಡುತ್ತಾರೆ. They will be very happy.

ಶ್ರೀ ಎಸ್. ಬಂಗಾರಪ್ಪ : ನಾನು ಒಪ್ಪುತ್ತೇನೆ. ಅದು ವಿಚಾರ ಮಾಡುತ್ತಿದ್ದೇವೆ. ಹೇಗೆ ಮಾಡಬೇಕು ಎಂದು. ಮಾನ್ಯ ಸಭಾದ್ಯಕ್ಷಣೆಯವರೆ, ಈ ಸಂದರ್ಭದಲ್ಲಿ ಇಲ್ಲಿ ಉಪನಾಯಕರ ಗಮನಕ್ಕೆ ತರುತ್ತಿದ್ದೇನೆ. ಪಾರ್ಕ್‌ಗಳು, ಆಡತ ಮೈದಾನ, ದೇವಸ್ಥಾನಗಳು, ಚರ್ಚ್, ಮಸೀದಿ ಇಂಥ ಜಾಗದಲ್ಲಿ ಸೈಟ್ ಮಾಡುವ ವಿಚಾರ ಸರ್ಕಾರಕ್ಕಿಲ್ಲ. That is completely ruled out. ಹಾಗೇನಾದರೂ ಇದ್ದರೆ ನಾವು ಅಪ್ರೂವ್ ಮಾಡುವುದಿಲ್ಲ. ಮಕ್ಕಳಿಗೆ, ಶಾಲೆಗೆ ಜಾಗ ಇರಲಿ. ಅದನ್ನು ತೆಗೆದುಕೊಂಡು ಹೋಗಿ ಸೈಟ್ ಮಾಡಿದರೆ ಇದು never ending business for a growing city like Bangalore. ಇದು ಎಲ್ಲಿಗೆ ಕೊನೆಯಾಗುತ್ತದೋ ಅರ್ಥವಾಗುತ್ತಿಲ್ಲ. ಈ ಅಮೆಂಡ್‌ಮೆಂಟ್ ತಮಗೆಲ್ಲಾ ಗೊತ್ತಿದೆ. ಇದನ್ನು ಪಾಸ್ ಮಾಡಬಹುದು. ಇದಕ್ಕೆ ತಾವು ಒಪ್ಪಿಗೆ ಕೊಡುತ್ತೀರೆಂದು ಭಾವಿಸಿದ್ದೇನೆ. ಇದನ್ನು ಸದನದ ಮತಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"1991ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸಬೇಕು...

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "2 ರಿಂದ 4ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಖಂಡ 2 ರಿಂದ 4ರವರೆಗೆ ವಿಧೇಯಕವನ್ನು ಸೇರಿಸಲ್ಪಡಲಾಯಿತು.

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : 1991ನೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1991ನೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೂ ಒಪ್ಪಿಗೆ ನೀಡಲಾಯಿತು.

2. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ 1991

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ 1991ನೇ ಕರ್ನಾಟರ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಈಗ ಇರುವ ಕಾಯ್ದೆ 1961ನೇ ಇಸವಿಯದ್ದಾಗಿದ್ದು ಈಗ ಮುಖ್ಯರಾಗಿ ಕಾಂಪ್ರೆಹೆನ್ಸಿವ್ ಡೆವಲೆಪ್‌ಮೆಂಟ್ ಪ್ಲಾನ್, ಔಟ್ ಲೈನ್ ಡೆವಲೆಪ್‌ಮೆಂಟ್ ಪ್ಲಾನ್ ಎರಡೂ ಸ್ಯಾಂಕ್ಷನ್ ಆದಮೇಲೆ 5 ವರ್ಷಗಳ ಕಾಲ ಬದಲಾವಣೆ ಮಾಡುವುದಕ್ಕೆ ಸರ್ಕಾರಕ್ಕೆ ಕೂಡ ಅಧಿಕಾರ ಇಲ್ಲ ಎಂದು ಈಗಾಗಲೇ ಅಡ್ವೋಕೇಟ್ ಜನರಲ್‌ರವರು ಒಪ್ಪೀನಿಯನ್ ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಈ ಮಸೂದೆಯಲ್ಲಿ ಸರ್ಕಾರ ಸಾಕಷ್ಟು ನೋಟೀಫಿಕೇಷನ್ ಮತ್ತು ಪೇಪರ್‌ನಲ್ಲಿ ಪಬ್ಲಿಷ್ ಮಾಡಿ 15 ದಿವಸಕ್ಕೆ ಮೊದಲು ಮಾಡಿಬಿಟ್ಟರೆ ಪ್ಲಾನಿಂಗ್ ಅಥಾರಿಟಿಯವರು ಕಳುಹಿಸುವ ಛೇಂಝ್ ಆಫ್ ಪ್ಲಾನ್ ಏನಿದೆ ಅದನ್ನು ಸರ್ಕಾರ ಅಪ್ರೂವ್ ಮಾಡಬಹುದು ಎಂದು ಸರ್ಕಾರಕ್ಕೆ ಅಧಿಕಾರ ಕೊಡುತ್ತಿದ್ದೇವೆ. ಮತ್ತೆ ಇನ್ನೂ 2-3 ಸಣ್ಣ ಬದಲಾವಣೆಗಳನ್ನು ಮಾಡಿದ್ದೇವೆ. ಪ್ಲಾನ್ ಆಪ್ರೂ ಮಾಡಬೇಕಾದರೆ ಸಿಂಗಲ್ ವಿಂಡೋ ಸಿಸ್ಟಮ್ ಮಾಡಬೇಕೆಂದು, ಕಾರ್ಪೊರೇಷನ್ ಲೆವಲ್‌ನಲ್ಲಿ ಕಮೀಷನರ್ ಮತ್ತು ಛೀಫ್ ಆಫೀಸರ್‌ಗೆ ಅಧಿಕಾರ ಕೊಟ್ಟು ಬಹುಶಃ ಒಂದೇ ಸಾರಿ ಕಾರ್ಪೊರೇಷನ್‌ನಲ್ಲಿ ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಇಲ್ಲದೆ ಒಂದು ಪ್ಲಾನ್ ಅಪ್ರೂವ್‌ಗೆ ಸರಳವಾಗಿ ಒಂದು ರೂಪ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಮತ್ತು 5 ವರ್ಷಗಳಿಂದ ಒಂದು ಸಾರಿ ಎನ್ನುವ ಬದಲು ಸಿಡಿಪಿ ಮತ್ತು ಒಡಿಪಿ ಆದಮೇಲೆ 10 ವರ್ಷಕ್ಕೆ ಪರಿಷ್ಕರಣ ಮಾಡುವುದಕ್ಕೆ ಅವಧಿಯನ್ನು ಆಳವಡಿಸಿದ್ದೇವೆ. ಏಕೆಂದರೆ 5 ವರ್ಷ ಬಹಳ ಕಡಿಮೆಯಾಗುತ್ತದೆ ಮತ್ತೆ ನಮ್ಮ ಕರ್ನಾಟಕದಲ್ಲಿ ನಾಲ್ಕು ಪ್ಲಾನಿಂಗ್ ಅಥಾರಿಟಿಗಳು ಇವೆ. ಆದರೆ ಅಲ್ಲಿನ ಮೆಂಬರ್ ಸೆಕ್ರೆಟರಿಯ ಅಧಿಕಾರ ಏನು ಎಂದು ಡಿಸೈಡ್ ಮಾಡಿಲ್ಲ. ಬಿಡಿಎ ಮತ್ತು ಅರ್ಬನ್ ಡೆವಲೆಪ್‌ಮೆಂಟ್ ಅಥಾರಿಟಿಯ ಕಮೀಷನರ್‌ಗೆ ಏನು ಅಧಿಕಾರ ಇದೆ ಅಂತಹ ಅಧಿಕಾರವನ್ನು ಇವರಿಗೆ ಕೊಟ್ಟಿದ್ದೇವೆ ಎಂದರೆ ಪ್ಲಾನಿಂಗ್ ಅಥಾರಿಟಿ ಏನಾದರೂ ರೆಸಲ್ಯೂಷನ್ ಮಾಡಿದರೆ ಸರ್ಕಾರಕ್ಕೆ ಅದರ ಬಗ್ಗೆ ರೆಫರ್ ಮಾಡಬಹುದು. ಕಾನೂನು ವಿರುದ್ಧವಾಗಿ ಏನಾದರೂ ರೆಸಲ್ಯೂಷನ್ ಪಾಸ್ ಮಾಡಿದರೆ ಅದನ್ನು ಸರ್ಕಾರಕ್ಕೆ ರೆಫರ್ ಮಾಡಬಹುದು. ಸರ್ಕಾರಕ್ಕೆ ಆ ರೆಸಲ್ಯೂಷನನ್ನು ತಡೆ ಹಿಡಿಯುವದಕ್ಕೆ ಅಧಿಕಾರ ಇದೆ. ಇದು ಸರಳವಾದ ತಿದ್ದುಪಡಿ ಇದ್ದು ಮಾನ್ಯ ಸದಸ್ಯರು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಇದು ಬಹಳ ಸರಳವಾದ ತಿದ್ದುಪಡಿ ಎನ್ನತಕ್ಕಂತಹ ಮಾತನ್ನು ಅಲ್ಲಿ ಹೇಳಿದ್ದಾರೆ. ಅದರ ಉದ್ದೇಶಗಳನ್ನು ನಾನು ಪ್ರಶ್ನೆ ಮಾಡುವುದಕ್ಕೆ ಬಯಸುವುದಿಲ್ಲ. ಈ ತಿದ್ದುಪಡಿ ಬಹಳ ಮಹತ್ತರವಾದಂತಹ ಬದಲಾವಣೆಗಳನ್ನು ಮಾಡತಕ್ಕಂತದ್ದು ಎಂದು ನಾನು ತಿಳಿದಿದ್ದೇನೆ. ಚೇಂಜ್ ಆಫ್ ಲ್ಯಾಂಡ್ ಯೂಸ್ 5 ವರ್ಷಕ್ಕೆ ಬದಲಾಗಿ 10 ವರ್ಷ ಮಾಡತಕ್ಕಂಥಹ ಒಂದು ಉದ್ದೇಶ ಏನು ಇದೆ ಎನ್ನುತಕ್ಕಂಥಹ ಮಾತನ್ನು ಹೇಳಿದ್ದೀರಿ. ಆದರ ಬಗ್ಗೆ ಎರಡು ವಾದಗಳು ಇವೆ. 10 ವರ್ಷ ಮಾಡುವುದರ ಬಗ್ಗೆ ನನ್ನದು ತಕರಾರು ಇಲ್ಲ.